


## ಡಿಸ್ಕೊ ಝೂ

ಆಕರ್ಷಣೀಯವಾದ ಗ್ರಾಫಿಕ್ಸ್. ಪ್ರಾಣಿಗಳನ್ನು ರಕ್ಷಿಸುವ ಸಣ್ಣ ಸಣ್ಣ ಗೇಮ್‌ಗಳಿವೆ. ಆ್ಯಂಡ್ರಾಯ್ಡ್‌ನ ಈ ಆ್ಯಪ್‌ನಲ್ಲಿ ಆಟ ಆಡುವವರು ಮೃಗಾಲಯದ ಮುಖ್ಯಸ್ಥನನ್ನು ಮುನ್ನಡೆಸಬೇಕು. ಆತ ಪ್ರಪಂಚದ ಎಲ್ಲಾ ಕಡೆ ತಿರುಗಿ ಮೃಗಾಲಯಕ್ಕೆ ಪ್ರಾಣಿಗಳನ್ನು ಸೇರಿಸುತ್ತಾನೆ. ಇದಕ್ಕೆ ನಿಮ್ಮ ಬಳಿ ಹಣವೂ ಸೇರುತ್ತದೆ. ಹೆಚ್ಚು ಹೆಚ್ಚು ಪ್ರಾಣಿಗಳನ್ನು ಸೇರಿಸಿದಂತೆ ಹಣದ ಗಳಿಕೆಯೂ ಹೆಚ್ಚಾಗುತ್ತದೆ. ಹೆಚ್ಚು ಹಣ ಗಳಿಸುವ ಇನ್ನೊಂದು ಉಪಾಯವೆಂದರೆ ಡಿಸ್ಕೊ ಪಾರ್ಟಿ. ಇದರಲ್ಲಿ ಪ್ರಾಣಿಗಳು ಡಾನ್ಸ್ ಮಾಡುತ್ತವೆ.

## ಬುಕ್ ಮೈ ಶೋ

ಇದು ಬಳಕೆದಾರ ಸ್ನೇಹಿ ಆ್ಯಪ್ ಆಗಿದ್ದು ಸಿನಿಮಾ ಮಂದಿರ, ಮಲ್ಟಿಪ್ಲೆಕ್ಸ್‌ನಲ್ಲಿ ಪದೇ ಪದೇ ಚಲನಚಿತ್ರ ವೀಕ್ಷಿಸುವವರಿಗೆ ಅನುಕೂಲಕರ. ಆ್ಯಪ್ ತೆರೆದು ತೀಡಿದರೆ ಚಿತ್ರಗಳ ಪಟ್ಟಿ ಕಾಣಿಸುತ್ತದೆ. ನಿಮ್ಮ ನೆಚ್ಚಿನ ಸಿನಿಮಾಗೆ ನೀವು ಮೊಬೈಲ್ ಮೂಲಕ ಟಿಕೆಟ್ ಬುಕ್ ಮಾಡಬಹುದು. ನಿಮಗೆ ಬೇಕಾದ ಸೀಟ್ ಕೂಡಾ ಬುಕ್ ಮಾಡಬಹುದು. ಇದು ಆ್ಯಂಡ್ರಾಯ್ಡ್, ಐಫೋನ್ ಮತ್ತು ಬ್ಲ್ಯಾಕ್‌ಬೆರಿ ಮೊಬೈಲ್‌ಗಳಲ್ಲಿ ಲಭ್ಯ. ಕ್ರಮೇಣ ಸಂಗೀತ ಕಾರ್ಯಕ್ರಮ, ನಾಟಕ ಮತ್ತು ಕ್ರೀಡಾ ಕಾರ್ಯಕ್ರಮಗಳಿಗೂ ಇದನ್ನು ವಿಸ್ತರಿಸುವ ಉದ್ದೇಶ ಹೊಂದಲಾಗಿದೆ.






## ಹೈಪರ್‌ಲ್ಯಾಪ್ಸ್

ಅತ್ಯಂತ ಆಕರ್ಷಕವಾದ ವಿಡಿಯೋಗಳನ್ನು ತಯಾರಿಸಬಹುದು. ಸರಳವಾದ ಇಂಟರ್‌ಫೇಸ್. ಐಓಎಸ್‌ನ ಈ ಆ್ಯಪ್ ಹಗಲಿನ ಬೆಳಕಲ್ಲಿ ವಿಡಿಯೋ ಶೂಟ್ ಮಾಡಲು ಅನುಕೂಲಕರ. ಖಾತೆ ತೆರೆಯುವ ಅವಶ್ಯಕತೆ ಇಲ್ಲ. ಆ್ಯಪ್ ಶುರು ಮಾಡಿದ ಕೂಡಲೇ ಕ್ಯಾಮೆರಾ ಕಾಣಿಸಿಕೊಂಡು ದುಂಡನೆಯ ಬಟನ್ ಗೋಚರಿಸುತ್ತದೆ. ಇದರಿಂದ ನೀವು ಶೂಟ್ ಮಾಡಬಹುದು. ಮೊದಲು ವಿಡಿಯೋ ಶೂಟ್ ಮಾಡಿ ನಂತರ ವಿಶೇಷ ಪರಿಣಾಮಗಳನ್ನು ಅನ್ವಯಿಸಬೇಕಾಗಿಲ್ಲ. ಹೈಪರ್‌ಲ್ಯಾಪ್ಸ್ ಶೂಟ್‌ನ ಜೊತೆ ಜೊತೆಗೇ ವಿಶೇಷ ಪರಿಣಾಮಗಳನ್ನು ಜೋಡಿಸುತ್ತದೆ. ಅಂದರೆ ಬೆಳಕು ಕಡಿಮೆ ಇದ್ದರೆ ಅದು ಸೂಚನೆಯನ್ನು ಕೂಡಲೇ ನೀಡುತ್ತದೆ. ಶೂಟಿಂಗ್ ಕೂಡಾ ಸರಳ. ದುಂಡನೆಯ ಬಟನ್ ಅನ್ನು ಟ್ಯಾಪ್ ಮಾಡಿದರಾಯ್ತು. ವೈನ್ ಆ್ಯಪ್ ತರಹ ಒತ್ತಿ ಹಿಡಿಯಬೇಕಾಗಿಲ್ಲ.




## ಯಾಹೂ ಏವಿಯೇಟ್ ಲಾಂಚರ್

ಈ ಉಚಿತ ಆ್ಯಪ್ ನಿಮ್ಮ ಫೋನ್ ಬಳಕೆಯನ್ನು ಸರಳಗೊಳಿಸಿ ಇತರ ಆ್ಯಪ್‌ಗಳನ್ನು ವ್ಯವಸ್ಥಿತವಾದ ಬಳಕೆಗೆ ಅನುವು ಮಾಡಿಕೊಡುತ್ತದೆ. ಇದರಿಂದ ಹೋಂ ಸ್ಕ್ರೀನ್ ಅನ್ನೂ ಬದಲಾಯಿಸಬಹುದು. ಬಲಗಡೆಯಿಂದ ಎಡಕ್ಕೆ ತೀಡುವುದರ ಮೂಲಕ ಆ್ಯಪ್ ಸಂಗ್ರಹವನ್ನು ಸ್ಕ್ರೀನ್ ಮೇಲೆ ತರಬಹುದು. ಯಾವುದೇ ಒಂದು ವಿಷಯದ ಮೇಲೂ ಈ ಆ್ಯಪ್‌ಗಳನ್ನು ಜೋಡಿಸಬಹುದು. ಅಂದರೆ ಮನರಂಜನೆ, ಸಂಗೀತ, ಸಾಮಾಜಿಕ ಜಾಲತಾಣ.. ಹೀಗೆ. ಪರದೆಯ ಕೆಳಗಡೆ ನಿಮ್ಮದೇ ಆ್ಯಪ್ ಸಂಗ್ರಹವನ್ನು ಸೃಷ್ಟಿಸಬಹುದು.

ಎಸ್. ತುಂಬೆ